ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ
ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ
1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯಕೇಂದ್ರ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು-01
ಫ್ಯಾಕ್ಸ್ 080-22860220 ದೂರವಾಣಿ ಸಂ 080-22860412 ಇ-ಮೇಲ್:deo.bangalorer@gmail.com

ಸಂಖ್ಯೆ:ಎಲ್‌ಎನ್‌ಡಿ(ಪಿ)ಸಿಆರ್:12/13-14 ದಿನಾಂಕ:21-10-2014.
ಸಂಖ್ಯೆ:ಎಲ್‌ಎನ್‌ಡಿ(ದೊ)ಸಿಆರ್/77/13-14

-: ಅಧಿಕೃತ ಜ್ಞಾಪನ :-

ವಿಷಯ: ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಮೇಲಿನನಾಯ್ಕರಂಡಹಳ್ಳಿ ಗ್ರಾಮದ ಸ.ನಂ.15/ಪಿ/1ರಲ್ಲಿ 20-00 ಎಕರೆ ಸರ್ಕಾರಿ ಖರಾಬು ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಸಲುವಾಗಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಪತ್ರ ಸಂಖ್ಯೆ:ಆರ್‌ಡಿ 55 ಎಲ್‌ಜಿಬಿ 2014, ದಿನಾಂಕ:29-09-2014.
2) ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ/ಸಿಆರ್/113/13-14, ದಿನಾಂಕ:23-12-2013.
3) ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ/ಸಿಆರ್/94/13-14, ದಿನಾಂಕ:05-10-2013.
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ ರವರ ಪತ್ರ ಸಂಖ್ಯೆ:ತಾಪಂದೊ/ಲೆಶಾ/13-14, ದಿನಾಂಕ:16-12-2013.

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಮೇಲಿನನಾಯ್ಕರಂಡಹಳ್ಳಿ ಗ್ರಾಮದ ಸ.ನಂ.15/ಪಿ/1ರಲ್ಲಿ 20-00 ಎಕರೆ ಸರ್ಕಾರಿ ಖರಾಬು ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಸಲುವಾಗಿ ಮಂಜೂರು ಮಾಡಲು ಶಿಫಾರಸ್ಸು ಮಾಡಿ ಉಲ್ಲೇಖ(2)ರಂತೆ ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಮೇಲಿನನಾಯ್ಕರಂಡಹಳ್ಳಿ ಗ್ರಾಮದ ಸ.ನಂ.15/ಪಿ/1ರಲ್ಲಿ ಒಟ್ಟು 100-00 ಎಕರೆ ಸರ್ಕಾರಿ ಖರಾಬು ಜಮೀನಿದ್ದು, ದರಖಾಸ್ತು ಮೆಮೊರಾಂಡಂನಲ್ಲಿ ದಾಖಲಿಸಿರುವಂತೆ ಸದರಿ ಗ್ರಾಮದಲ್ಲಿ ಒಟ್ಟು 305 ರಾಸುಗಳಿದ್ದು, ಪ್ರಶ್ನಿತ ಜಮೀನು ಬಿ.ಡಿ.ಓ.ಗೆ ಮಂಜೂರಾಗಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲದ ಕಾರಣ ಸರ್ಕಾರಿ ಖರಾಬು ಎಂದು ತಿದ್ದುಪಡಿ ಆದೇಶ ಹೊರಡಿಸಿ, ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಸಲುವಾಗಿ 20-00 ಎಕರೆ ಜಮೀನು ಮಂಜೂರು ಮಾಡಲು ಉಲ್ಲೇಖ(2)ರಂತೆ ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ ರವರು ಶಿಫಾರಸ್ಸು ಮಾಡಿರುತ್ತಾರೆ.

ಸದರಿಯವರ ಶಿಫಾರಸ್ಸಿನ ಮೇರೆಗೆ ಈ ಕಛೇರಿಯಿಂದ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಉಲ್ಲೇಖ(1)ರ ಸರ್ಕಾರದ ಪತ್ರದಂತೆ, ಪ್ರಶ್ನಿತ ಸ.ನಂ.15/ಪಿ/1ರಲ್ಲಿ 20-00 ಎಕರೆ ಸರ್ಕಾರಿ ಖರಾಬು ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 71ರನ್ವಯ ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಸಲುವಾಗಿ ಜಮೀನನ್ನು ಕಾಯ್ದಿರಿಸಿ, ಸರ್ಕಾರದ ಪೂರ್ವಾನುಮೋದನೆಯನ್ನು ನೀಡಲಾಗಿದೆ.

.....2

DIG Fr... for kind ... 30/10

Scanned with CamScanner

ಆದ್ದರಿಂದ ಉಲ್ಲೇಖ(1)ರ ಸರ್ಕಾರದ ಪೂರ್ವಾನುಮೋದನೆಯನ್ನು ಅನುಸರಿಸಿ, ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಮೇಲಿನನಾಯ್ಕರಂಡಹಳ್ಳಿ ಗ್ರಾಮದ ಸ.ನಂ.15/ಪಿ/1ರಲ್ಲಿ 20-00 ಎಕರೆ ಸರ್ಕಾರಿ ಖರಾಬು ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 71ರನ್ವಯ ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಕಾಯ್ದಿರಿಸಿ ಈ ಕೆಳಕಾಣಿಸಿದ ಷರತ್ತಿಗೊಳಪಡಿಸಿ ಆದೇಶಿಸಿದೆ.

**ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಮೇಲಿನನಾಯ್ಕರಂಡಹಳ್ಳಿ ಗ್ರಾಮದ ಸ.ನಂ.15/ಪಿ/1ರಲ್ಲಿ 20-00 ಎಕರೆ ಸರ್ಕಾರಿ ಖರಾಬು ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಸಲುವಾಗಿ ಮಂಜೂರು ಮಾಡಿರುವ ಜಮೀನಿನ ಚೆಕ್ಕುಬಂದಿ.**

| ಸ.ನಂ. | ವಿಸ್ತೀರ್ಣ ನಕ್ಷೆಯಂತೆ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
|---|---|---|---|---|---|
| 15/ಪಿ/1 | 20-00 ಎಕರೆ | ಸ.ನಂ.15ರ ಜಮೀನು | ರಸ್ತೆ | ಸ.ನಂ.15ರ ಉಳಿಕೆ ಜಮೀನು | ಸ.ನಂ.15ರ ಉಳಿಕೆ ಜಮೀನು |

**ಷರತ್ತುಗಳು:-**

1. ಈ ಜಮೀನನ್ನು ಯಾವ ಉದ್ದೇಶಕ್ಕಾಗಿ ಕಾಯ್ದರಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸುವುದು.
2. ಪ್ರಶ್ನಿತ ಜಮೀನನ್ನು ಬೇರೆ ಉದ್ದೇಶಕ್ಕೆ ಬಳಸಿಕೊಂಡಲ್ಲಿ ಭೂಮಿಯನ್ನು ಅದರ ಎಲ್ಲಾ ಪೂರ್ವಾಧಿಕಾರಗಳಿಂದ ಮುಕ್ತವಾಗಿ ಪುನಃ ಸರ್ಕಾರದ ವಶಕ್ಕೆ ತೆಗೆದುಕೊಳ್ಳಾಲಾಗುವುದು.
3. ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಎರಡು ವರ್ಷಗಳ ಒಳಗಾಗಿ ಯಾವ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದೆಯೇ, ಅದೇ ಉದ್ದೇಶಕ್ಕೆ ಉಪಯೋಗಿಸಿಕೊಳ್ಳತಕ್ಕದ್ದು.
4. ಭೂಮಿಯನ್ನು ಸ್ವಾಧೀನ ಪಡಿಸಿದ ನಂತರ ಹಸ್ತಾಂತರಿಸಿದ ವಿಸ್ತೀರ್ಣದ, ಚಕ್ಕುಬಂದಿಯನ್ನು ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ರವರಿಂದ ಗುರುತಿಸಿಕೊಂಡು 3 ತಿಂಗಳೊಳಗಾಗಿ ಕಾಂಪೌಂಡ್/ತಂತಿ ಬೇಲಿ ಹಾಕಿ, ಸದರಿ ಭೂಮಿ ಒತ್ತುವರಿಯಾಗದಂತೆ ರಕ್ಷಣೆ ಮಾಡಿಕೊಳ್ಳತಕ್ಕದ್ದು.

ಸಹಿ/-
ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪ್ರತಿಯನ್ನು:-

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
2) ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ ರವರಿಗೆ
3) ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ರವರಿಗೆ ಕಳುಹಿಸುತ್ತಾ, ಈ ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಸಲುವಾಗಿ ಹಸ್ತಾಂತರಿಸಿ ಅದರಂತೆ ಕಂದಾಯ ದಾಖಲೆಗಳಲ್ಲಿ ಸೂಕ್ತ ಮಾರ್ಪಡುಗಳನ್ನು ಮಾಡಲು ಸೂಚಿಸಿದೆ.
4) ಕಛೇರಿ ಪ್ರತಿ.

2/1/14

ಜಿಲ್ಲಾಧಿಕಾರಿಯವರ ಪರವಾಗಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ.

Scanned with CamScanner